ದಿಃ 31-10-2015 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ಅರ್ಜಿದಾರ ಪರ ವಕೀಲರಾದ ಶ್ರೀ ಎಸ್.ಕೆ. ಇವರಿಂದ ಮುಂದುವರೆದ ಮುಖ್ಯ ವಿಚಾರಣೆಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ. ಕ್ರಯಪತ್ರದ ಎರಡು ದೃಢೀಕೃತ ಪತ್ರಗಳನ್ನು ಹಾಜರುಪಡಿಸಿದ್ದು ನಿಪಿ-13 ಮತ್ತು ನಿಪಿ-14, ಪಾಲು ವಿಭಾಗ ಪತ್ರದ ದೃಢೀಕೃತ ನಕಲನ್ನು ನಿಪಿ-15, ಪಿ.ಎಂ.ಸಿ. ಇವರು ನೀಡಿದ ಹಿಂಬರಹವನ್ನು ನಿಪಿ-16, ಕಟ್ಟಡ ಪರವಾನಗಿ ಪಡೆದುಕೊಳ್ಳುವ ಸಲುವಾಗಿ ಪಾವತಿಸಿದ ಫೀ ಇದರ ಪಾವತಿಯನ್ನು ನಿಪಿ-17, ಕಟ್ಟಡ ಪರವಾನಗಿ ಪತ್ರವನ್ನು ನಿಪಿ-18, ಎರಡು ಋಣಬಾರ ಪ್ರಮಾಣ ಪತ್ರಗಳನ್ನು ಕ್ರಮವಾಗಿ ನಿಪಿ-19 ಮತ್ತು ನಿಪಿ-20, ಆದಾರ ತಿರುವಳಿ ಪತ್ರವನ್ನು ನಿಪಿ-21, ಹರಿಹರ ಮುನ್ಸಿಪಾಲಿಟಿಯವರು ಕೊಟ್ಟ ಉತಾರವನ್ನು ನಿಪಿ-22, ಆಸ್ತಿಯ ವಿವರ ಹಾಗೂ ತೆರಿಗೆ ಸ್ವಯಂ ನಿರ್ಧರಣಾ ನಮೂನೆ ದಾಖಲೆಗಳನ್ನು ನಿಪಿ-23 ರಿಂದ ನಿಪಿ-26, ಎಂಟು ಭಾವಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-27 ರಿಂದ ನಿಪಿ-34, ಫೊಟೋಗಳಿಗೆ ಸಂಬಂಧಪಟ್ಟ ಸಿ.ಡಿ. ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-35 ಮತ್ತು ಋಣಬಾರ ಪ್ರಮಾಣ ಪತ್ರವನ್ನು ನಿಪಿ-36 ಎಂದು ಗುರುತಿಸಲಾಯಿತು.

ಈ ಸಮಯದಲ್ಲಿ ಎದುರುದಾರ ಪರ ವಕೀಲರಾದ ಶ್ರೀ ಬಿ.ಎಚ್. ಇವರು ಪಾಟೀ ಸವಾಲಿಗೆ ಸಮಯ ಕೇಳಿದ್ದು ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.